# 'ಸಿನಿ ಚೈತ್ರ'

...25ನೇ ಪುಟದಿಂದ

ಸಾಹಿತ್ಯ ಒಳಗೊಂಡಿದ್ದ 'ತಿಥಿ' ವಿಶಿಷ್ಟ ಕಥೆ ಹಾಗೂ ನಿರೂಪಣೆಯಿಂದ ಗಮನಸೆಳೆದ ಸಿನಿಮಾ. 'ಸಂಸ್ಕಾರ' ಚಿತ್ರದ ನಂತರ ಲೊಕಾರ್ನೊ ಚಿತ್ರೋತ್ಸವದಲ್ಲಿ ಪ್ರಶಸ್ತಿ ಗಳಿಸಿದ ಅಗ್ಗಳಿಕೆ ಈ ಚಿತ್ರದ್ದು. ಅಂತರರರಾಷ್ಟ್ರೀಯ ಪ್ರೇಕ್ಷಕರ ಜೊತೆಗೆ ಸ್ಥಳೀಯ ಪ್ರೇಕ್ಷಕರನ್ನೂ ಸೆಳೆದ ಈ ಸಿನಿಮಾ – ಪ್ರಯೋಗಶೀಲ ಚಿತ್ರಗಳು ಜನಸಾಮಾನ್ಯರಿಗೂ ರುಚಿಸಬಲ್ಲವು ಹಾಗೂ ಗಲ್ಲಾಪೆಟ್ಟಿಗೆಯಲ್ಲಿ ಯಶಸ್ವಿಯಾಗಬಲ್ಲವು ಎನ್ನುವುದಕ್ಕೆ ಒಳ್ಳೆಯ ಉದಾಹರಣೆ. ಸೆಂಚುರಿಗೌಡ, ಗಡ್ಡಪ್ಪ, ತಮ್ಮಣ್ಣ, ಅಭಿ ಪಾತ್ರಗಳು ಚಿತ್ರದ ಚೌಕಟ್ಟು ಮೀರಿ ಜನಪ್ರಿಯವಾದವು. 'ತಿಥಿ' ಚಿತ್ರದ ನೆರಳಲ್ಲಿ ಕೆಲವು ಚಿತ್ರಗಳು ('ತರ್ಲೆ ವಿಲೇಜ್' ಹಾಗೂ 'ಏನ್ ನಿನ್ ಪ್ರಾಬ್ಲಮ್ಮು') ರೂಪುಗೊಂಡಿರುವುದು ಆ ಚಿತ್ರದ ಪ್ರಭಾವವನ್ನು ಸೂಚಿಸುವಂತಿದೆ.

## ಹೃದಯ ಮುಟ್ಟಿದ ಕಬೀರ

ಕಲೆ ಮತ್ತು ವ್ಯಾಪಾರದ ತಕ್ಕಡಿಯಲ್ಲಿ, ವ್ಯಾಪಾರದ ಬಟ್ಟಲೇ ಮಹತ್ವ ಗಳಿಸಿರುವ ಸಂದರ್ಭದಲ್ಲಿ ಸದಭಿರುಚಿ ಮತ್ತು ಸಾಮಾಜಿಕ ಕಾಳಜಿಯ ಚಿತ್ರಗಳನ್ನು ರೂಪಿಸುವುದು ಸಾಮಾನ್ಯ ಸಂಗತಿಯಲ್ಲ. ಈ ಹಿನ್ನೆಲೆಯಲ್ಲಿ ಇಂದ್ರಬಾಬು ನಿರ್ದೇಶನದ 'ಸಂತೆಯಲ್ಲಿ ನಿಂತ ಕಬೀರ' ಚಿತ್ರದ್ದು ಬಹುದೊಡ್ಡ ಸಾಹಸ. ಐತಿಹಾಸಿಕ ಕಥನವನ್ನು ಆಧುನಿಕ ಸಂದರ್ಭದಲ್ಲಿ ಮರುನಿರೂಪಿಸಿದ ವಿಶಿಷ್ಟ ಸಾಹಸ ಈ ಸಿನಿಮಾ. ಭೀಷ್ಮ ಸಹಾನಿ ಅವರ ರಂಗಕೃತಿಯನ್ನು ಆಧರಿಸಿದ ಕನ್ನಡದ ಕಬೀರ, ಸಾಮಾಜಿಕ ಸಾಮರಸ್ಯದ ಸಂದೇಶ ಒಳಗೊಂಡ ಕಲಾಕೃತಿ. ಶಿವರಾಜ್‌ಕುಮಾರ್ ನಟನೆಯ ಈ ಚಿತ್ರ ಕಥನದ ಜೊತೆಗೆ, ವಿಶಿಷ್ಟ ನಿರೂಪಣೆ ಹಾಗೂ ಕಬೀರನ ದೋಹಾಗಳಿಂದ ಗಮನಸೆಳೆಯುತ್ತದೆ. ಇಸ್ಮಾಯಿಲ್ ದರ್ಬಾರ್ ಸಂಗೀತಕ್ಕೆ ಕಾಡುವ ಗುಣವಿದೆ. ಚಿತ್ರಕ್ಕೆ ಸಾಹಿತ್ಯ ನೀಡಿರುವ ಗೋಪಾಲ್ ವಾಜಪೇಯಿ ಅವರ ಸ್ಮರಣೆಯ ರೂಪದಲ್ಲೂ ಕಬೀರನನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳಬೇಕು.



ವರ್ಷದ ಜೋಡಿ.. ಯಶ್ ಮತ್ತು ರಾಧಿಕಾ ಪಂಡಿತ್

## ಹಸಿವು ತಣಿಸಿದ ದೋಸೆ

ದೇಹ ಹಾಗೂ ಮನಸ್ಸಿನ ಹಸಿವಿನ ಕುರಿತು ಮಾತನಾಡುವ 'ನೀರ್ ದೋಸೆ' ಕನ್ನಡ ಸಂದರ್ಭದಲ್ಲಿ ಒಂದು ವಿಶಿಷ್ಟ ಪ್ರಯತ್ನ. ರತಿ ವರ್ಚಸ್ಸಿನ ಜೊತೆಗೆ ಅಂತರಂಗದ ಸೌಂದರ್ಯವನ್ನು ಅನಾವರಣಗೊಳಿಸುವ ನಿರ್ದೇಶಕ ವಿಜಯ್ ಪ್ರಸಾದ್ ಪ್ರಯತ್ನ ಆಕರ್ಷಕವಾಗಿದೆ. ಶವಗಳನ್ನು ಸಾಗಿಸುವ ವಾಹನದಲ್ಲಿ ಶೃಂಗಾರದ ಕನಸುಗಳು ಚಿಗುರುವುದು, ಮಸಣದಲ್ಲಿ ಜೀವನಪ್ರೀತಿ ಮೊಳೆಯುವುದು ಚಿತ್ರದ ವಿಶೇಷ. ಸಣ್ಣತನಗಳನ್ನು ಮೀರುವ ಮೂಲಕ ಬದುಕಿನ ಸೌಂದರ್ಯವನ್ನು ಆಸ್ವಾದಿಸಬೇಕು ಎನ್ನುವ ಸೂಚನೆ ಸಿನಿಮಾದಲ್ಲಿ ಇದ್ದಂತಿದೆ. 'ನೀರ್ ದೋಸೆ'ಯ ರುಚಿ ಹೆಚ್ಚುವಲ್ಲಿ ಜಗ್ಗೇಶ್ ಮತ್ತು ಎಚ್.ಜಿ. ದತ್ತಾತ್ರೇಯ ಅವರ ಜುಗಲಬಂದಿ ಪೂರಕವಾಗಿದೆ. ಸುಮನ್ ರಂಗನಾಥ್ ಹಾಗೂ ಹರಿಪ್ರಿಯಾ ಅವರ ಪಾತ್ರಪೋಷಣೆಯೂ ಸಶಕ್ತವಾಗಿದೆ.

## ಅರೆರೇ... ರಾಮ ರಾಮ...

ಉತ್ತಮ ಚಿತ್ರವೊಂದನ್ನು ಮಾಡಲಿಕ್ಕೆ ದುಬಾರಿ ಬಜೆಟ್ ಅಗತ್ಯವಿಲ್ಲ ಎನ್ನುವುದಕ್ಕೆ ಅತ್ಯುತ್ತಮ ಉದಾಹರಣೆ 'ರಾಮಾ ರಾಮಾ ರೇ'. ಸಂಗೀತ, ಛಾಯಾಗ್ರಹಣ, ಸಂಕಲನ – ಹೀಗೆ ತಾಂತ್ರಿಕ ಅಂಶಗಳಲ್ಲಿ ಗಮನಸೆಳೆಯುವ ಸಿನಿಮಾ ಕಥೆಯ ನಿಟ್ಟಿನಲ್ಲಿಯೂ ಸಶಕ್ತವಾಗಿದೆ. 'ತಿಥಿ' ಚಿತ್ರದಂತೆ, ಸಹೃದಯರ ಮೆಚ್ಚುಗೆಯೊಂದಿಗೆ ಗಲ್ಲಾಪೆಟ್ಟಿಗೆಯಲ್ಲೂ ಯಶಸ್ವಿಯಾದುದು ಚಿತ್ರದ ವಿಶೇಷ.  ಸೆರೆಮನೆಯಿಂದ ಪರಾರಿಯಾಗುವ ಖೈದಿಯ ಪಯಣದ ಕಥೆ ಚಿತ್ರದಲ್ಲಿದೆ. ಖೈದಿಯೊಂದಿಗೆ ಯುವಜೋಡಿಯೂ ಪಯಣದಲ್ಲಿ ಜೊತೆಯಾಗುತ್ತದೆ. ಈ ಪಯಣ, ಸಾವು–ಬದುಕಿನ ಸಂಘರ್ಷಕ್ಕೆ ರೂಪಕವಾಗುತ್ತದೆ. ರೂಪಕಗಳ ಮೂಲಕವೇ ಸಿನಿಮಾ ಬೆಳೆಸುವ ನಿರ್ದೇಶಕ ಡಿ. ಸತ್ಯಪ್ರಕಾಶ್ ನೋಡುಗರನ್ನು ತಲ್ಲಣಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ.



ದನ ಕಾಯೋನು ಚಿತ್ರದಲ್ಲಿ ವಿಜಯ್ ಹಾಗೂ ಪ್ರಿಯಾಮಣಿ

## ಮನಸು ಕದ್ದ ಗಯ್ಯಾಳಿಗಳು

ಪೂರ್ಣಚಂದ್ರ ತೇಜಸ್ವಿ ಅವರ ಕಥೆಯನ್ನು ಆಧರಿಸಿದ 'ಕಿರಗೂರಿನ ಗಯ್ಯಾಳಿಗಳು' ತನ್ನಲ್ಲಿನ 'ಬಿಡುಗಡೆ'ಯ ಗುಣದಿಂದಾಗಿ ಮೆಚ್ಚುಗೆಯಾಗುವ ಸಿನಿಮಾ. ಕಿರಗೂರಿನ ಹೆಣ್ಣುಮಕ್ಕಳು ತಮ್ಮ ದಿಟ್ಟತನದಿಂದಾಗಿ ಬದುಕನ್ನು ಗಾಳಿಗೋಪುರವಾಗದಂತೆ ಕಾಪಾಡಿಕೊಳ್ಳುವ ಪ್ರಯತ್ನವನ್ನು ನಿರ್ದೇಶಕಿ ಸುಮನ್ ಕಿತ್ತೂರು ಉತ್ಸಾಹದಿಂದ ನಿರೂಪಿಸಿದ್ದಾರೆ. ವಾತ್ಸಲ್ಯ, ಚೆಲುವು, ತುಂಟತನ, ಜೀವನಪ್ರೀತಿ, ಸಾವಧಾನ – ಈ ಎಲ್ಲ ಗುಣಗಳೊಂದಿಗೆ ಹೆಣ್ಣುಮಕ್ಕಳ ಭಾವಕೋಶ ಮತ್ತು ಗ್ರಾಮೀಣ ಬದುಕನ್ನು ಸಿನಿಮಾ ಸೊಗಸಾಗಿ ಕಟ್ಟಿಕೊಡುತ್ತದೆ. ಗಂಡಸರ ಸಣ್ಣತನಗಳನ್ನು ಬಯಲಿಗೆಳೆಯುತ್ತಲೇ ಊರಿನ ಆರೋಗ್ಯವನ್ನು ಕಾಪಾಡುವ ಛಲವಂತೆಯರ ಕಿರಗೂರಿನ ಕಥನ ಈ ಹೊತ್ತಿನ ಅಗತ್ಯದಂತೆಯೂ ಭಾಸವಾಗುತ್ತದೆ.

**ಒಟ್ಟು 170 ಕನ್ನಡ ಸಿನಿಮಾಗಳು ತೆರೆಕಂಡ ವರ್ಷವಿದು. ಇದೊಂದು ದಾಖಲೆಯೇ. 'ನೋಟಿನ ರಗಳೆ' ಇಲ್ಲವಾಗಿದ್ದಲ್ಲಿ ಈ ಸಂಖ್ಯೆ 200 ದಾಟುತ್ತಿತ್ತೇನೋ!**